
# ಶ್ರೀನಾರಾಯಣ ಗುರು ಸ್ವಾಮಿಗಳು

◆ ಪ್ರವ್ರಾಜಿಕಾ ಶಾಶ್ವತಪ್ರಾಣಾ

[ಕೇರಳದಲ್ಲಿ ಜಾತಿಯ ಪಿಡುಗು ಭೀಕರ ರೂಪ ತಾಳಿದ್ದ ಕಾಲವದು. ತಮ್ಮ ಪರಿವ್ರಾಜಕ ದಿನಗಳಲ್ಲಿ ಸ್ವಾಮಿ ವಿವೇಕಾನಂದರು ಕೇರಳದಲ್ಲಿ ಸಂಚರಿಸುತ್ತಿದ್ದಾಗ, ಅಲ್ಲಿನ ಈ ಸಾಮಾಜಿಕ ಅನಿಷ್ಟವನ್ನು ಪ್ರತ್ಯಕ್ಷವಾಗಿ ಕಂಡು, ತೀವ್ರವಾಗಿ ನೊಂದು, ಅತ್ಯಂತ ಕಟುವಾದ ಭಾಷೆಯಲ್ಲಿ ಅದನ್ನು ಖಂಡಿಸಿದ್ದರು. ಸಾಮಾಜಿಕ ನ್ಯಾಯಕ್ಕಾಗಿ ಕೇರಳದಲ್ಲಿ ಹೋರಾಡಿದ ಪ್ರಮುಖ ವ್ಯಕ್ತಿ ಶ್ರೀನಾರಾಯಣ ಗುರು. ಅವರ ಕಿರು ಪರಿಚಯವನ್ನು ಮಾಡಿಕೊಟ್ಟಿರುವ ಪ್ರವ್ರಾಜಿಕಾ ಶಾಶ್ವತಪ್ರಾಣಾ ಅವರು ಶ್ರೀಶಾರದಾ ಮಠದ ತ್ರಿಚೂರು ಶಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.]

ಸ್ವಾಮಿ ವಿವೇಕಾನಂದರು ತಮ್ಮ ಪರಿವ್ರಾಜಕ ದಿನಗಳಲ್ಲಿ ಬೆಂಗಳೂರಿಗೆ ಭೇಟಿಯಿತ್ತಾಗ ಡಾ. ಪಲ್ಪು ಅವರ ಅತಿಥಿಯಾಗಿದ್ದರು. ಡಾ.ಪಲ್ಪು ಅವರು ಕೇರಳದಲ್ಲಿ ತಮಗೆ ಯಾವ ಭವಿಷ್ಯವೂ ಇಲ್ಲದ್ದರಿಂದ ಒಳ್ಳೆಯ ಭವಿಷ್ಯವನ್ನು ಅರಸಿ ಬೆಂಗಳೂರಿಗೆ ಬಂದಿದ್ದರು. "ನೌಕರಿಗಾಗಿ ಇಷ್ಟು ದೂರ ಏಕೆ ಬಂದಿರಿ?" ಎಂದು ಸ್ವಾಮೀಜಿ ಕೇಳಿದಾಗ, ತಾವು ಎಜ್ಞವ ಎಂಬ ಕೀಳು ಜಾತಿಗೆ ಸೇರಿದವರೆಂದೂ, ಕೇರಳದಲ್ಲಿ ತಮ್ಮ ಜಾತಿಯ ಜನ ಬಹಳ ದುಃಸ್ಥಿತಿಯಲ್ಲಿರುವರೆಂದೂ ಪಲ್ಪು ಉತ್ತರಿಸಿದರು. ಮೇಲುಜಾತಿಯವರು ಸಮಾಜದ ಕೆಳವರ್ಗದವರನ್ನು, ವಿಶೇಷವಾಗಿ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ, ಶೋಷಿಸುತ್ತಾರೆಂಬುದನ್ನು ಕೇಳಿ, ನೊಂದು ಸ್ವಾಮೀಜಿ ಕೇಳಿದರು, "ನೀವು ಪ್ರತಿಯೊಂದಕ್ಕೂ ಮೇಲುಜಾತಿಯವರನ್ನು ಏಕೆ ಅವಲಂಬಿಸಬೇಕು? ನಿಮ್ಮ ಜನಾಂಗದಲ್ಲಿಯೇ ಒಬ್ಬ ಯೋಗ್ಯನಾದ ವ್ಯಕ್ತಿಯನ್ನು ಆರಿಸಿಕೊಂಡು ಆತನ ನೇತೃತ್ವದಲ್ಲಿ ಪ್ರಗತಿಯನ್ನು ಸಾಧಿಸಲು ಸಾಧ್ಯವಿಲ್ಲವೇ?" ಸ್ವಾಮಿ ವಿವೇಕಾನಂದರ ಈ ಸಂಕಲ್ಪ ಕೇರಳದಲ್ಲಿ ಎಜ್ಞವ ಜನಾಂಗದ 'ನಾರಾಯಣಗುರು' ಎಂದು ಪ್ರಸಿದ್ಧರಾದ ಮಹಾತ್ಮರ ಮೂಲಕ ಪೂರೈಸಿತು.

ಹತ್ತೊಂಬತ್ತನೆಯ ಶತಮಾನವನ್ನು ಭಾರತದ ಜಾಗೃತಿಯ ವಸಂತ ಕಾಲವೆಂದೇ ಎನ್ನಬಹುದು. ದೇಶದಲ್ಲಿ ಎಲ್ಲೆಲ್ಲೂ ರಾಷ್ಟ್ರೀಯತೆಯ ಆಂದೋಲನದ ಗಾಳಿ ಬೀಸುತ್ತಿದ್ದರೆ ಭಾರತದ ಒಂದು ಮೂಲೆಯಲ್ಲಿ ನಿಶ್ಶಬ್ದವಾಗಿ ನಿರಾಡಂಬರವಾಗಿ ಜನರಲ್ಲಿ ಹೊಸ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಲು ಪ್ರಯತ್ನಿಸಿದವರು ಕೇರಳದ ಆದಿವಾಸಿಗಳಾದ ಶ್ರೀನಾರಾಯಣ ಗುರು. ಕಳೆದ ವರ್ಷ ಅವರ ೧೫೦ನೇ ಜನ್ಮಜಯಂತಿಯ ವರ್ಷವಾಗಿತ್ತು. ನಿಮ್ನವರ್ಗದವರ ದುಃಸ್ಥಿತಿಯ ನಿವಾರಣೆಗಾಗಿ, ಅವರಿಗೆ ಸಾಮಾಜಿಕ ಸಮಾನತೆಯನ್ನು ದೊರಕಿಸಿಕೊಡಲು ಹೋರಾಡಿದ ಮಹಾತ್ಮ ಈತ.



ತಿರುವನಂತಪುರಕ್ಕೆ ಹತ್ತು ಮೈಲಿ ದೂರವಿರುವ ಚೆಂಪಳಂತಿಯಲ್ಲಿ ೧೮೫೫ರಲ್ಲಿ ಇವರ ಜನನ. ತಾಯಿಯ ಹೆಸರು ಕುಟ್ಟಿ ಅಮ್ಮ ಮತ್ತು ತಂದೆ ಮಾದನ್ ಆಸನ್. ಆಸನ್ ಎಂದರೆ ಆಚಾರ್ಯರು ಎಂದರ್ಥ. ಆಸನ್‌ರು ಸಂಸ್ಕೃತ ವಿದ್ವಾಂಸರು. ಆಯುರ್ವೇದ ಮತ್ತು ಜ್ಯೋತಿಷ್ಯ ಶಾಸ್ತ್ರದಲ್ಲಿ ಪ್ರವೀಣರು ಹಾಗೂ ಶಿವನ ಪರಮಭಕ್ತರೂ ಆಗಿದ್ದರು. ಅವರು ಜನಿಸಿದ್ದ ಎಜ್ಞವ ಜಾತಿಯು ಆ ಕಾಲಕ್ಕೆ ಬ್ರಾಹ್ಮಣ ಮತ್ತು ನಾಯರ್‌ಗಳಷ್ಟು ಮೇಲು ವರ್ಗವಲ್ಲದಿದ್ದರೂ, ಹರಿಜನರಿಗಿಂತ ಭಿನ್ನವಾಗಿತ್ತು. ಮಕ್ಕಳು ಸಾಮಾನ್ಯವಾಗಿ ಅಳುತ್ತ ಹುಟ್ಟಿದರೆ, ನಾರಾಯಣಗುರು ರೋದನವನ್ನೇ ಮಾಡಲಿಲ್ಲವಂತೆ! ತನ್ನ ಜನನ ಒಂದು ಮಹೋದ್ದೇಶದ ಸಾಧನೆಗಾಗಿ ಎಂದು ಆ ಶಿಶುವಿನ ಸುಪ್ತ ಪ್ರಜ್ಞೆಯಲ್ಲಿತ್ತೋ ಏನೋ! ತಂದೆತಾಯಿ ಮಗುವನ್ನು ಪ್ರೀತಿಯಿಂದ ನಾಣು ಎಂದು ಕರೆಯುತ್ತಿದ್ದರು.

ಮಗು ಬೆಳೆಯುತ್ತಿದ್ದಂತೆ ಅದರ ಸ್ವಭಾವದಲ್ಲಿ ಕೆಲವು ವಿಶೇಷಗಳು ಕಂಡು ಬಂದವು. ಬಾಲ್ಯಸಹಜವಾದ ತುಂಟತನವಿದ್ದರೂ, ಮಿತಭಾಷಿಯಾಗಿದ್ದ. ತನಗಿಂತಲೂ ಕೆಳಜಾತಿಯ ಮಕ್ಕಳೊಡನೆ ಆಟವಾಡುತ್ತಾ ಅವರನ್ನು ಮುಟ್ಟಿ ಹಿರಿಯರಿಗೆ ಕಸಿವಿಸಿಯನ್ನುಂಟು ಮಾಡುತ್ತಿದ್ದ. ಬಾಲ್ಯದಿಂದಲೇ ನಾಣುವಿಗೆ ಸಾಧುಸಂತರೆಂದರೆ ಅಪಾರವಾದ ಶ್ರದ್ಧೆ. ಚಿಕ್ಕವಯಸ್ಸಿನಲ್ಲಿ ಅವರೊಡನೆ ಬೆರೆತು ಅವರ ಜೀವನಶೈಲಿಗೆ ಮನಸೋತಿದ್ದ.

ನಾಣು ಆರು ವರ್ಷದವನಾಗಿದ್ದಾಗ ಅವನ ಮನೆಯಲ್ಲಿ ಒಬ್ಬರು ಸಾವನ್ನಪ್ಪಿದರು. ಸಹಜವಾಗಿಯೇ ಎಲ್ಲರೂ ಜೋರಾಗಿ ಬೊಬ್ಬೆ ಇಟ್ಟು ರೋದಿಸತೊಡಗಿದರು. ಆದರೆ ಶವಸಂಸ್ಕಾರವೆಲ್ಲ ಮುಗಿದು ಸ್ವಲ್ಪ ಹೊತ್ತಾದ ನಂತರ ಮನೆಯಲ್ಲಿ ಏನೂ ಆಗಿಲ್ಲವೆಂಬಂತೆ ಎಲ್ಲರೂ ಮಾಮೂಲಾಗಿಯೇ ವ್ಯವಹರಿಸ

ತೊಡಗಿದರು. ಆದರೆ ಆ ಹೊತ್ತಿನಲ್ಲಿ ನಾಣು ಅಲ್ಲಿಂದ ಕಣ್ಮರೆಯಾದದ್ದು ಅವರ ಗಮನಕ್ಕೆ ಬಂತು. ಅವನನ್ನು ಹುಡುಕತೊಡಗಿದರು. ಕೊನೆಗೆ ಬಾಲಕನು ಮನೆಯ ಹತ್ತಿರದಲ್ಲಿರುವ ಕುರುಚಲು ಕಾಡಿನಲ್ಲಿ ಏಕಾಂತವಾಗಿ ಚಿಂತಾಮಗ್ನನಾಗಿರುವುದನ್ನು ಕಂಡು ಕಾರಣ ಕೇಳಿದರು. ಆಗ ಆ ಹುಡುಗ, "ನೀವು ಸಾವಿನ ಸಂದರ್ಭದಲ್ಲಿ ಒಂದು ದೊಡ್ಡ ರೋದನವನ್ನೇ ಮಾಡಿದಿರಿ. ಆದರೆ ಆಗಲೇ ಎಲ್ಲವನ್ನೂ ಮರೆತು ತಮಾಷೆ, ಹಾಸ್ಯಗಳಲ್ಲಿ ಮುಳುಗಿ ಸಂತೋಷದಿಂದಿರುವಿರಿ" ಎಂದು ತನ್ನ ಆಲೋಚನೆಯನ್ನು ತೋಡಿಕೊಂಡ. ಆ ಹುಡುಗನಿಗೆ ಏನು ಹೇಳಬೇಕೆಂದು ಹಿರಿಯರಿಗೆ ತೋಚಲಿಲ್ಲವೆಂದು ಬೇರೆ ಹೇಳಬೇಕಿಲ್ಲ.

ನಾಣುವಿನ ಕೈಯಿಂದ 'ಶ್ರೀಹರಿ' ಎಂದು ಬರೆಸುವುದರ ಮೂಲಕ ವಿದ್ಯಾಭ್ಯಾಸ ಪ್ರಾರಂಭವಾಯಿತು. ಆಡುನುಡಿಯಾದ ಮಲಯಾಳವನ್ನು ಓದಲು ಕಲಿತನಂತರ, ಸಂಸ್ಕೃತ ಹಾಗೂ ತಮಿಳನ್ನು ಕಲಿತನು. ಬಿಡುವಿನ ಸಮಯದಲ್ಲಿ ತಂದೆತಾಯಿಯರಿಗೆ ವ್ಯವಸಾಯದ ಕೆಲಸದಲ್ಲಿ ಸಹಾಯ ಮಾಡುತ್ತಿದ್ದ. ಉಳುವಾಗ ಎತ್ತುಗಳನ್ನು ತಮ್ಮ ಇಷ್ಟದಂತೆ ನಡೆಯಲು ಬಿಟ್ಟು, ಪ್ರಾಣಿಗಳ ಬಗ್ಗೆ ಕನಿಕರದ ಮನೋಧರ್ಮವನ್ನು ವ್ಯಕ್ತಪಡಿಸುತ್ತಿದ್ದ. ಪುಣ್ಯದಿನಗಳಲ್ಲಿ ಧ್ಯಾನಮಗ್ನನಾಗಿ ಕಾಲವನ್ನು ಕಳೆಯುತ್ತಿದ್ದ. ಅವನಲ್ಲಿ ಬಾಲ್ಯದಿಂದಲೇ ಸ್ಪಷ್ಟವಾದ ಆಧ್ಯಾತ್ಮಿಕ ಒಲವಿದ್ದುದನ್ನು ಕಾಣಬಹುದಾಗಿತ್ತು. ಒಮ್ಮೆ ತನ್ನ ಇಷ್ಟದೇವತೆಯಾದ ಶ್ರೀಕೃಷ್ಣನ ದರ್ಶನವಾಗಿ ಅವನ ಹಿಂದೆ ಓಡಿಹೋದಾಗ, ಶ್ರೀಕೃಷ್ಣನು ಒಂದು ಸರೋವರದಲ್ಲಿ ಅದೃಶ್ಯನಾದನಂತೆ! ತನ್ನ ೧೫ನೆಯ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡ ಶೋಕದಿಂದ ಮನೆ ಬಿಟ್ಟು ಹೊರಟರೂ ಹುಡುಗನಲ್ಲಿದ್ದ ವಿದ್ಯಾರ್ಜನೆಯ ಹಂಬಲ ಅವನನ್ನು ೮೦ ಕಿ.ಮೀ. ದೂರದಲ್ಲಿದ್ದ ಕುರುನಾಗಪಲ್ಲಿಗೆ ಕೊಂಡೊಯ್ದಿತು. ಅಲ್ಲಿ ಸತತ ೧೨ ವರ್ಷ ವ್ಯಾಸಂಗ ಮಾಡಿ ಸಂಸ್ಕೃತ ಮತ್ತು ವೇದೋಪನಿಷತ್ತುಗಳಲ್ಲಿ ವಿದ್ವತ್ತನ್ನು ಸಂಪಾದಿಸಿದನು.

ಬಹುಶ್ರುತನಾಗಿದ್ದ ಯುವಕ ನಾಣು ಉತ್ತಮ ಕವಿಯೆಂದು ಗುರುತಿಸಲ್ಪಟ್ಟಿದ್ದ. 'ಗಜೇಂದ್ರಮೋಕ್ಷ'ವನ್ನು ಕುರಿತು ಸುಂದರವಾದ ಕವಿತೆಯನ್ನು ರಚಿಸಿದ್ದ. ನೈಷ್ಠಿಕ ಬ್ರಹ್ಮಚಾರಿಯಾಗಿರಬೇಕೆಂದು ನಾಣು ದೃಢಸಂಕಲ್ಪ ಮಾಡಿದ್ದರಿಂದ ಮನೆಯವರು ಮದುವೆಯಾಗಲು ಮಾಡಿದ ಬಲವಂತಕ್ಕೆ ಮಣಿಯಲಿಲ್ಲ. ೨೦ ವರ್ಷ ವಯಸ್ಸಿನವನಾಗಿದ್ದಾಗ ನಾಣುವಿನ ತಂದೆಯೂ ತೀರಿಕೊಂಡರು. ಅನಂತರ ವೇದಾಂತವನ್ನು ಅಭ್ಯಸಿಸಲು ಅರಯೂರಿನಲ್ಲಿ ಶ್ರೀಚಟ್ಟಾಂಬಿ ಸ್ವಾಮಿಗಳನ್ನು ಭೇಟಿಯಾದರು.ಈ ಸಮಾಗಮದಿಂದ ನಾಣುವಿನಲ್ಲಿದ್ದ ಆಧ್ಯಾತ್ಮಿಕ ಪಿಪಾಸೆ ಮತ್ತೂ ತೀವ್ರವಾಯಿತು. ಅವರಿಂದ ಧ್ಯಾನ ಮತ್ತು ಯೋಗಾಭ್ಯಾಸಗಳನ್ನು ಕಲಿತರು. ಸ್ವಲ್ಪ ಕಾಲದ ಅನಂತರ ನಾರಾಯಣರಲ್ಲಿ ಪರಿವ್ರಾಜಕರಾಗಿ ಹೊರಡುವ ಹಂಬಲ ತೀವ್ರವಾಗಿ ದೇಶಸಂಚಾರಕ್ಕೆ ಹೊರಟರು.

ಕನ್ಯಾಕುಮಾರಿಯ ಸಮೀಪದಲ್ಲಿರುವ ಮರುತ್ವಾನ್ ಮಲೆಯನ್ನು ತಲುಪಿ ಅಲ್ಲಿಯ ಗುಹೆಯೊಂದರಲ್ಲಿ ಕಠಿಣವಾದ ತಪಸ್ಸನ್ನು ಆಚರಿಸಿದರು. ಇದೇ ಸಮಯದಲ್ಲಿಯೇ ಸಂನ್ಯಾಸವನ್ನು ಸ್ವೀಕರಿಸಿ, ಜಾತಿಭೇದಗಳಿಲ್ಲದೆ ಎಲ್ಲರ ಮನೆಯಲ್ಲೂ ಭಿಕ್ಷೆ ಸ್ವೀಕರಿಸುತ್ತಿದ್ದರು. ಒಮ್ಮೆ ನಾಗರಕೋಯಿಲ್‌ನಲ್ಲಿರುವಾಗ ಮೌನ ವ್ರತವನ್ನು ಆಚರಿಸುತ್ತಿದ್ದ ಒಬ್ಬ ಯೋಗಿನಿ, ಇವರ ಆಧ್ಯಾತ್ಮಿಕ ಔನ್ನತ್ಯವನ್ನು ಗುರುತಿಸಿ, ಅಲ್ಲಿಯ ಜನರಿಗೆ ಸಂಜ್ಞೆಯ ಮೂಲಕ ಇವರು ಸಾಮಾನ್ಯರಲ್ಲ ಎಂದು ತಿಳಿಸಿದಳು.

ನಾರಾಯಣ ಗುರು ಅವರು ಕೊಯಮತ್ತೂರು, ಪೊಳ್ಳಾಚಿ, ಪಳನಿಗಳನ್ನು ಸುತ್ತಿ ಕೊಚ್ಚಿನ್‌ಗೆ ಬಂದು ಸೇರಿದರು. ಮುಂದೆ ತಮ್ಮ ಪರ್ಯಟನೆಯ ದಿನಗಳನ್ನು ಕುರಿತು ಅವರು ಈ ರೀತಿ ಹೇಳುತ್ತಿದ್ದರು. "ತಿನ್ನಲು ಏನು ಸಿಕ್ಕಿದರೂ ವಿಚಾರ ಮಾಡದೆ ಸ್ವೀಕರಿಸಬೇಕು. ಒಮ್ಮೆ ನಾನು ಕೊಯಮತ್ತೂರಿನಲ್ಲಿ ಸಂಚರಿಸುತ್ತಿದ್ದ ಸಮಯದಲ್ಲಿ ಹಳ್ಳಿಯೊಂದನ್ನು ತಲುಪಿದಾಗ ಮಧ್ಯರಾತ್ರಿಯಾಗಿತ್ತು. ತೀವ್ರವಾದ ಹಸಿವು, ದಾಹದಿಂದ ಬಳಲಿದ್ದೆ. ಸುತ್ತಲೂ ಕಣ್ಣಾಡಿಸಿದೆ. ದನಕರುಗಳಿಗಾಗಿ ನೀರು ಕುಡಿಯಲು ನಿರ್ಮಿಸಿದ್ದ ತೊಟ್ಟಿಗಳು ಕಂಡವು. ಒಂದರಲ್ಲಿ ಕೈಯಿಟ್ಟು ತಡಕಾಡಲು, ಅದರ ಅಡಿಭಾಗದಲ್ಲಿ ಅನ್ನದ ಅಗುಳು ಶೇಖರವಾಗಿದ್ದನ್ನು ಕಂಡೆ. ಬಹಳ ಎಚ್ಚರಿಕೆಯಿಂದ ಒಂದು ಬಟ್ಟೆಯ ತುಂಡಿನಿಂದ ಆ ಭಾಗವನ್ನು ಬಸಿದು ಎತ್ತಿ ಅದನ್ನೇ ತಿಂದು ನನ್ನ ಹಸಿವನ್ನು ತೀರಿಸಿಕೊಂಡೆ."

ತಿರುವನಂತಪುರಕ್ಕೆ ಹತ್ತಿರವಿರುವ ಅರುವೀಪುರಕ್ಕೆ ಬಂದು ನಾರಾಯಣಗುರು ತಮ್ಮನ್ನು ಸಮಾಜಸೇವೆಯಲ್ಲಿ ತೊಡಗಿಸಿಕೊಂಡರು. ಆಗಿನ ಕಾಲದಲ್ಲಿ ನಿಮ್ನವರ್ಗದವರಿಗೆ ದೇವಸ್ಥಾನಗಳಲ್ಲಿ ಪ್ರವೇಶವಿರಲಿಲ್ಲ. ಅವರು ಈ ವರ್ಗದವರಿಗಾಗಿ ಹೊಸದೊಂದು ಕ್ಷೇತ್ರವನ್ನು ನಿರ್ಮಿಸಿದರು. ಯಾವ ದೇವತೆಯ ವಿಗ್ರಹವನ್ನು ಪ್ರತಿಷ್ಠಾಪಿಸುವರೋ ಎಂದು ಭಕ್ತರು ಕಾತುರರಾಗಿ ಎದುರು ನೋಡುತ್ತಿದ್ದರು. ಪ್ರತಿಷ್ಠಾಪನೆಯ ಮುಹೂರ್ತವು ಹತ್ತಿರವಾದಂತೆ ಗುರುಗಳು ಹತ್ತಿರವೇ ಹರಿಯುತ್ತಿದ್ದ ನದಿಯ ಕಡೆಗೆ ಹೋಗುತ್ತಿರುವುದನ್ನು ಕಂಡು ಜನಸಮೂಹ ಚಕಿತಗೊಂಡಿತು. ನೀರಿನಲ್ಲಿ ಮುಳುಗು ಹಾಕಿದ ಗುರುಗಳು ಬಹಳ ಹೊತ್ತಾದರೂ ಮೇಲೆ ಬಾರದೇ ಇದ್ದುದನ್ನು ಕಂಡು ಎಲ್ಲರಿಗೂ ಆತಂಕವಾಯಿತು. ಆದರೆ ಸ್ವಲ್ಪ ಹೊತ್ತಿನ ನಂತರ ಗುರುಗಳು ನಿಧಾನವಾಗಿ ನದಿಯಿಂದ ಎದ್ದರು. ಅವರ ಹಸ್ತದಲ್ಲಿ ಸುಂದರವಾದ ಶಿವಲಿಂಗವು ವಿರಾಜಿಸುತ್ತಿರುವುದನ್ನು ಕಂಡು ಎಲ್ಲರೂ ಆನಂದಭರಿತರಾದರು. ಆ ಕ್ಷೇತ್ರದಲ್ಲಿ ಶಿವಲಿಂಗದ ಪ್ರತಿಷ್ಠಾಪನೆಯನ್ನು ಮಾಡಿ ಮನುಷ್ಯನಿಗೆ ಮನುಷ್ಯತ್ವವೇ ಜಾತಿ, ಬ್ರಾಹ್ಮಣಾದಿ ಜಾತಿಗಳಿಲ್ಲ, ದೇವರನ್ನು ಪೂಜಿಸುವ ಹಕ್ಕು ಎಲ್ಲರಿಗೂ ಇದೆ, ಬ್ರಾಹ್ಮಣರಿಗೆ ಮಾತ್ರವೇ ಅಲ್ಲ ಎಂದು ಹೇಳಿ ಬ್ರಾಹ್ಮಣ ಪೂಜಾರಿಗಳನ್ನು ಧಿಕ್ಕರಿಸಿ, ಮತಾಂಧತೆಯ ಕೋಟೆಯನ್ನು ಮುರಿದರು. ಆಧ್ಯಾತ್ಮಿಕತೆಯ ಮಾರ್ಗದಲ್ಲಿ ನಡೆಯಲು ಎಲ್ಲರಿಗೂ ಜನ್ಮಸಿದ್ಧವಾದ ಹಕ್ಕು ಇದೆ ಮತ್ತು ಇದು ಯಾವುದೇ ಒಂದು ಪಂಗಡದ ಖಾಸಗಿ ಸ್ವತ್ತಲ್ಲ ಎಂಬ ಸತ್ಯವನ್ನು .ಮತ್ತೆ ಮತ್ತೆ ಸಾರಿದರು.

ಕೇರಳದಲ್ಲೆಲ್ಲ ಸಂಚರಿಸುತ್ತ ವೈಕಂನಲ್ಲಿ ದೇವೇಶ್ವರ ಶಿವ

ನನ್ನು, ಕೊಜಿಕೋಡಿನಲ್ಲಿ ಶ್ರೀಕಂಠೇಶ್ವರನನ್ನು, ಶಿವಗಿರಿಯಲ್ಲಿ ದೇವಿ ಶಾರದೆಯನ್ನು ಪ್ರತಿಷ್ಠಾಪನೆ ಮಾಡಿದುದೇ ಅಲ್ಲದೆ ಇನ್ನೂ ಅನೇಕ ಕ್ಷೇತ್ರಗಳಲ್ಲಿ ದೇವತಾವಿಗ್ರಹಗಳನ್ನು ಪ್ರತಿಷ್ಠಾಪಿಸಿದರು. ಮೂರ್ತಿಪೂಜೆಯ ಬಗ್ಗೆ ಆಳವಾದ ವಿಶ್ವಾಸವನ್ನಿರಿಸಿಕೊಂಡಿದ್ದ ಅವರು ಹೇಳಿದರು: "ಭಕ್ತರು ಕ್ಷೇತ್ರವನ್ನು ಪ್ರವೇಶಿಸುವುದು ಅಲ್ಲಿರುವ ಮೂರ್ತಿ ಕಲ್ಲಿನದು ಎಂಬ ಭಾವನೆಯಿಂದಲ್ಲ. ಅವರು ಆರಾಧಿಸುತ್ತಿರುವ ದೇವತೆಯೇ ಆ ಕಲ್ಲಿನಲ್ಲಿ ವಿರಾಜಿಸುತ್ತಿರುವುದು ಎಂಬ ಭಾವದಿಂದ."

ಸಮಾಜಸೇವೆಯ ಅನೇಕ ಚಟುವಟಿಕೆಗಳಲ್ಲಿ ತಮ್ಮನ್ನು ಸದಾಕಾಲವೂ ತೊಡಗಿಸಿಕೊಂಡಿದ್ದರು. ಅದರಲ್ಲಿ ವಿಶಿಷ್ಟವಾದುದು ಎರ್ನಾಕುಲಂ ಜಿಲ್ಲೆಯ ಅಲುವಾ ಎಂಬಲ್ಲಿ ಅದ್ವೈತ ಆಶ್ರಮದ ಸ್ಥಾಪನೆ. ಅದರ ಉದ್ದೇಶವು ಸಾಧಾರಣ ಜನರಿಗೂ ಅದ್ವೈತದ ಸಾರವನ್ನು ಅರುಹಿ ಅದಕ್ಕೆ ಅನುಸಾರವಾಗಿ ಜೀವನ ರೀತಿಯನ್ನು ಅಳವಡಿಸಿಕೊಳ್ಳುವುದು ಎಂಬುದಾಗಿದ್ದಿತು. ಆಶ್ರಮದಲ್ಲಿ ಒಂದು ಶಾಲೆಯನ್ನು ಆರಂಭಿಸಿದರು. ಅಲ್ಲಿ ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳ ಅಧ್ಯಯನವನ್ನು ಕಡ್ಡಾಯಗೊಳಿಸಿದರು. ಹಾಜರಿಯನ್ನು ತೆಗೆದುಕೊಳ್ಳುವಾಗ ವಿದ್ಯಾರ್ಥಿಗಳು 'ಅಸ್ಮಿ'ಅಥವಾ 'ಆಗತೋಽಸ್ಮಿ' ಎಂದು ಉತ್ತರಿಸಬೇಕಾಗಿತ್ತು. ಇಲ್ಲಿ ಹರಿಜನ ಮಕ್ಕಳಿಗೂ ಪ್ರವೇಶವಿತ್ತು ಮತ್ತು ಆಗಾಗ ಒಕ್ಕೂಟ ಸಮಾರಂಭಗಳನ್ನು ನಡೆಸಿ ಎಲ್ಲ ಜಾತಿಯವರನ್ನು ಒಂದುಗೂಡಿಸುತ್ತಿದ್ದರು.

೧೯೦೩ರಲ್ಲಿ ಎಜವಾ ಪಂಗಡದವರನ್ನು ಉದ್ಧರಿಸಲು 'ಶ್ರೀನಾರಾಯಣ ಧರ್ಮಪರಿಪಾಲನಾ ಸಂಘ' ಎಂಬ ಸಂಸ್ಥೆಯನ್ನು ಆರಂಭಿಸಿದರು. ಈಗಲೂ ಸಹ ಈ ಸಂಸ್ಥೆಯು ಕೇರಳದಲ್ಲಿ ಹಲವಾರು ವಿದ್ಯಾಸಂಸ್ಥೆಗಳನ್ನು ನಡೆಸಿಕೊಂಡು ಹೋಗುತ್ತಿರುವುದು. ೧೯೨೮ರಲ್ಲಿ ಸಂನ್ಯಾಸದ ಪರಂಪರೆ ಮುಂದುವರಿಯಲು 'ನಾರಾಯಣ ಧರ್ಮಸಂಘ' ಎಂಬ ಸಂಸ್ಥೆಯನ್ನು ಆರಂಭಿಸಿ ಸ್ವಾಮಿ ಬೋಧಾನಂದರನ್ನು ಅದರ ಮುಖ್ಯಸ್ಥರನ್ನಾಗಿ ನೇಮಿಸಿದರು. ಈ ಸಂಸ್ಥೆಯ ಉದ್ದೇಶವು ವಿದ್ಯಾಭ್ಯಾಸ, ದೈವಭಕ್ತಿ, ಐಕ್ಯತೆ, ವ್ಯವಸಾಯ, ವ್ಯಾಪಾರ, ಗೃಹಕೈಗಾರಿಕೆ ಮುಂತಾದವುಗಳನ್ನು ಪ್ರೋತ್ಸಾಹಿಸುವುದಾಗಿತ್ತು. "ವಿದ್ಯೆಯಿಂದ ಪ್ರಬುದ್ಧರಾಗಬೇಕು" "ವ್ಯವಸಾಯ ಮಾಡಿ ಸಂಪತ್ತನ್ನು ಗಳಿಸಬೇಕು!" "ಸಂಘಟನೆಯಿಂದ ಶಕ್ತರಾಗಬೇಕು" ಇವು ಅವರ ಮಂತ್ರವಾದವು.

ನಾರಾಯಣ ಗುರು ಅವರ ಕೀರ್ತಿ ಅವರ ಜೀವಿತಕಾಲದಲ್ಲೇ ಹರಡಿತ್ತು. ೧೯೨೨ರಲ್ಲಿ ಅವರನ್ನು ಭೇಟಿಮಾಡಲು ರವೀಂದ್ರನಾಥ ಠಾಕೂರರು ಆಶ್ರಮಕ್ಕೆ ಆಗಮಿಸಿದ್ದರು. ೧೯೨೪ರಲ್ಲಿ ವೈಕಂ ಸತ್ಯಾಗ್ರಹದ ಸಮಯದಲ್ಲಿ ಮಹಾತ್ಮ ಗಾಂಧೀಜಿಯವರು ಇವರನ್ನು ಭೇಟಿ ಮಾಡಿದರು. ಇನ್ನೂ ಅನೇಕ ಗಣ್ಯ ವ್ಯಕ್ತಿಗಳು ಇವರನ್ನು ಕಂಡು ಆದರ ಗೌರವಗಳನ್ನು ತೋರಿರುವರು. ಉನ್ನತವಾದ ಆಧ್ಯಾತ್ಮಿಕ ವ್ಯಕ್ತಿ, ಸಮಾಜಸುಧಾರಕ, ಕ್ರಾಂತಿಕಾರಿ ಆದ ಶ್ರೀನಾರಾಯಣ ಗುರು ಅವರು ೧೯೨೮ರಲ್ಲಿ ಇಹಲೋಕವನ್ನು ತ್ಯಜಿಸಿ ಪರಂಧಾಮವನ್ನು ಸೇರಿದರು.

ನಾರಾಯಣ ಗುರು ಅವರು ವೇದಾಂತ ಪ್ರಚಾರವನ್ನು ವ್ಯಾಪಕವಾಗಿ ಕೈಗೊಂಡರು. ಅವರು ಕೈಗೊಂಡ ಕೆಲವು ಸುಧಾರಣೆಗಳು ಹೀಗಿವೆ :

೧) ಕೇರಳದ ಎಜವ ಪಂಗಡದವರ ಸರ್ವತೋಮುಖ ಬೆಳವಣಿಗೆಗಾಗಿ ಕಾರ್ಯಕ್ರಮಗಳು. ಅವರಲ್ಲಿ ಮನೆ ಮಾಡಿದ್ದ ಕೀಳರಿಮೆಯನ್ನು ತೊಲಗಿಸಿ ತಾವೂ ಸಹ ಹಿಂದೂಗಳೇ ಎಂಬ ಹೆಮ್ಮೆ ಮತ್ತು ಆತ್ಮವಿಶ್ವಾಸವನ್ನು ಮೂಡಿಸಿದರು.

೨) ಪ್ರತಿಯೊಬ್ಬನಲ್ಲೂ ತನ್ನ ಧರ್ಮದಲ್ಲಿದ್ದುಕೊಂಡೇ ಇತರ ಧರ್ಮಗಳನ್ನು ಆದರದಿಂದ ಕಾಣುವ ಮನೋಧರ್ಮ ವಿರಬೇಕು ಎಂದು ಹೇಳಿ ಮತಾಂತರವನ್ನು ತಪ್ಪಿಸಿದರು.

೩) ದೇವಸ್ಥಾನಗಳಲ್ಲಿ ಶಿವಪ್ರತಿಷ್ಠಾಪನೆ ಮಾಡಿ ಪಶುಬಲಿಯನ್ನು ನಿರ್ನಾಮ ಮಾಡಿದರು.

೪) ಅನಾವಶ್ಯಕವಾಗಿ ಉತ್ಸವಗಳನ್ನು ಆಚರಿಸುವುದನ್ನು ನಿಷೇಧಿಸಿದರು, ಹಾಗೂ ಮದುವೆಗಳನ್ನು ಅತೀ ಸರಳ ರೀತಿಯಲ್ಲಿ ಮಾಡಲು ಪ್ರೇರೇಪಿಸಿದರು.

ಅವರ ಮುದ್ರಾವಾಕ್ಯವು "ಒಂದು ಜಾತಿ, ಒಂದು ಮತ, ಒಂದು ದೈವ" ಎಂಬುದಾಗಿದ್ದಿತು. ಅವರ ಅಭಿಮತವು ಒಬ್ಬನ ಚಾರಿತ್ರ್ಯದಿಂದಲೇ ಅವನು ಭವಿಷ್ಯದಲ್ಲಿ ಏನಾಗುವನು ಎಂಬುದನ್ನು ನಿರ್ಧರಿಸಬಹುದು ಎಂಬುದಾಗಿದ್ದಿತು. ಸಂನ್ಯಾಸಿಯಾಗುವುದು ಅವನವನ ಕರ್ಮದಿಂದಲ್ಲದೇ ವಿಧಿನಿಯಮಗಳಿಂದಲ್ಲ ಎಂಬುದನ್ನು ಅವರು ಸ್ವಂತ ಜೀವನದಲ್ಲಿ ಆಚರಿಸಿ ತೋರಿದರು. ಮಲಯಾಳಂ, ಸಂಸ್ಕೃತ ಹಾಗೂ ತಮಿಳಿನಲ್ಲಿ ಒಟ್ಟಾರೆ ೪೫ ಕೃತಿಗಳನ್ನು ರಚಿಸಿರುವರು.

ಇವರನ್ನು ಕುರಿತು ರೊಮ್ಮೆ ರೋಲಾ ಅವರು ಕರ್ಮಶೀಲರಾದ ಜ್ಞಾನಿ, ದಲಿತರ ಉದ್ಧಾರಕ್ಕಾಗಿ " ಅಗಾಧ ಸೇವೆ ಸಲ್ಲಿಸಿ, ದಕ್ಷಿಣ ಭಾರತದಲ್ಲಿ ಗಾಂಧೀತತ್ತ್ವಗಳಿಗನುಗುಣವಾದ ಸಮಾಜ ಸೇವೆಯಲ್ಲಿ ತೊಡಗಿದ ಮಹಾನುಭಾವ " ಎಂದು ಮೆಚ್ಚಿ ಬರೆದರು.

ನಾರಾಯಣ ಗುರುಗಳ ಗುರುಗಳಾದ ಚಟ್ಟಾಂಬಿ ಸ್ವಾಮಿಗಳನ್ನು ಸ್ವಾಮಿ ವಿವೇಕಾನಂದರು ಎರ್ನಾಕುಲಂನಲ್ಲಿ ೧೮೯೨ನೇ ಡಿಸೆಂಬರ್‌ನಲ್ಲಿ ಭೇಟಿಯಾಗಿದ್ದರು. ಅವರು ಒಬ್ಬ ದೊಡ್ಡ ಸಂತರೆಂದು ಕೇಳಿ ಸ್ವಾಮೀಜಿ ಸ್ವತಃ ತಾವೇ ಅವರ ಮನೆಗೆ ಆಹ್ವಾನವಿಲ್ಲದೆಯೇ ಭೇಟಿಯಿತ್ತಿದ್ದರು! ತಮ್ಮ ಈ ಭೇಟಿಯನ್ನು ಸ್ವಾಮೀಜಿ ತಮ್ಮ ಡೈರಿಯಲ್ಲಿ ದಾಖಲಿಸುತ್ತಾ, "ನಾನಿಂದು ಮಲಬಾರಿನ ಒಬ್ಬ ನಿಜವಾದ ಸಂತನನ್ನು ಭೇಟಿಯಾದೆ" ಎಂದು ಬರೆದರು. ತಮ್ಮಿಬ್ಬರ ಭೇಟಿಯನ್ನು ಕುರಿತು ಅತ್ಯಂತ ನಮ್ರತೆಯಿಂದ "ಸ್ವಾಮಿ ವಿವೇಕಾನಂದರ ಮತ್ತು ನನ್ನ ನಡುವಿನ ವ್ಯತ್ಯಾಸ ಕೇವಲ ಒಂದು ಗರುಡ ಹಾಗೂ ಸೊಳ್ಳೆಯ ನಡುವಿನ ವ್ಯತ್ಯಾಸದಂತೆ" ಎನ್ನುತ್ತಿದ್ದರು ಚಟ್ಟಾಂಬಿಗಳು. "ಸ್ವಾಮಿ ವಿವೇಕಾನಂದರು ಹಾಡುವಾಗ ಆ ಕಂಠ ಒಂದು ಬಂಗಾರದ ಕಲಶದಂತೆ ಇತ್ತು. ಓಹ್! ಎಂತಹ ಮಾಧುರ್ಯದಿಂದ ಕೂಡಿದ ಧ್ವನಿ!" ಎಂದು ಆಗಾಗ ಹೇಳುತ್ತಿದ್ದರು.